ನಾಲ್ಕೂವರೆಗೆ ಎದ್ದು ಮನೆಮನೆಗೆ ಪೇಪರು ಹಾಕುತ್ತಾರೆ. ಸರಿಯಾಗಿ ಮುಂಜಾನೆ ಐದೂ ಕಾಲಿಗೆ ರಾಮನ ಟೈಲರಿಂಗ್ ಅಂಗಡಿಯ ಅದೇ ಹಳದಿ ಬೆಳಕಿನಡಿ ಐದು ನಿಮಿಷ ನಿಂತು ಸುಧಾರಿಸಿಕೊಂಡು ತಾವೂ ವಿಜಯ ಕರ್ನಾಟಕದ ಹಾಳೆ ಮಗಚುತ್ತಾರೆ. ಆಮೇಲೆ ಅಲ್ಲಿಂದ ಮುಂದೆ ಪೇಪರು ಹಾಕುತ್ತಾ ಹೋಗುವುದನ್ನು ಯಾರೂ ನೋಡಬಹುದು."

'ರಿಕವರಿ' ಕತೆಯ ದುಗ್ಗಪ್ಪ ಮತ್ತು 'ಸಾಕ್ಷಿ' ಕತೆಯ ಸುನಂದಕ್ಕನ ತಮ್ಮ, ಇಬ್ಬರೂ ಪರಿಸ್ಥಿತಿಯ ಕೈಗೊಂಬೆಗಳು. ಒಂದರಲ್ಲಿ ಸಾಮರಸ್ಯವಿಲ್ಲದ ಕುಂಟುಂಬದ ಹಾಗೂ ಸ್ವಾರ್ಥಮೂಲ ವ್ಯವಹಾರದ ಒಳಸುಳಿಗಳಲ್ಲಿ ನಲುಗುವ ವ್ಯಕ್ತಿಯಿದ್ದರೆ, ಇನ್ನೊಂದರಲ್ಲಿ ಅವ್ಯಕ್ತ ಅಪರಾಧದ ಹಾಗೂ ದುರ್ಗಮ ನ್ಯಾಯಾಂಗ ವ್ಯವಸ್ಥೆಯ ಚಕ್ರವ್ಯೂಹದಲ್ಲಿ ಬಳಲುವ ವ್ಯಕ್ತಿಯಿದ್ದಾನೆ. ಎರಡೂ ಕತೆಗಳಲ್ಲಿ ಅನ್ಯಾಯಕ್ಕೆ ಒಳಗಾಗುವವನು ನಿರಪರಾಧಿಯೇ.

ನರೇಂದ್ರ ಪೈ ಜಗತ್ತನ್ನು ಒಬ್ಬ ಲೇಖಕನಂತೆ ನೋಡುವುದಿಲ್ಲ; ತಾವೇ ಸೃಷ್ಟಿಸಿದ ಪಾತ್ರವೊಂದು ನೋಡುವಂತೆ ನೋಡುತ್ತಾರೆ. ಬಹುಶಃ ಇದೇ ಕಾರಣದಿಂದ ಅವರು ನಿರೂಪಣೆಯಲ್ಲಿ ಮಾಡಿರುವ ವಿಭಿನ್ನ ಪ್ರಯೋಗಗಳು ವರ್ತಮಾನದ ಜೀವನದಂತೆಯೇ ಸಂಕೀರ್ಣವಾಗಿವೆ. ಈ ಸಂಕಲನದಲ್ಲಿ ನನಗೆ ಬಹುಮುಖ್ಯವೆನ್ನಿಸಿದ ಕತೆ 'ಕಥನ ಕುತೂಹಲ'. ಒಂದು ಯಶಸ್ವೀ ಪ್ರಯೋಗದ ದೃಷ್ಟಿಯಿಂದಲೂ ಗಮನಾರ್ಹವಾಗಿರುವ ಈ ಕತೆಯಲ್ಲಿ ಘಟನೆಗಳ ಅನುಕ್ರಮಣಿಕೆಯನ್ನು ಸಂಪೂರ್ಣವಾಗಿ ತ್ಯಜಿಸಿರುವ ಕಥಾಸಂವಿಧಾನವಿದ್ದು ಅದು ಓದುಗನಿಗೆ ಸವಾಲೊಡ್ಡುವ ಒಂದು ಜಿಗ್‌ಸಾ ಪಜಲ್‌ನಂತಿದೆ. ಕತೆಯಲ್ಲಿ ಅನ್ಯೋನ್ಯತೆಯಿಲ್ಲದ ಒಂದು ಕುಟುಂಬವಿದೆ, ಸ್ವಾರ್ಥಕ್ಕಾಗಿ ಇತರರನ್ನು ನಿರ್ದಯವಾಗಿ ಉಪಯೋಗಿಸಿಕೊಳ್ಳುವ ವ್ಯಕ್ತಿಗಳಿದ್ದಾರೆ, ಅಹಿತಕರ ದಾಂಪತ್ಯವಿದೆ, ಪರಿಸ್ಥಿತಿಯ ಕೈಗೊಂಬೆಯಾಗಿ ಸಾವಿಗೀಡಾಗುವ, ಮಹಾಭಾರತದ ಅಶ್ವತ್ಥಾಮನಂಥ ನಿಷ್ಪಾಪಿಯೊಬ್ಬನಿದ್ದಾನೆ. ತುಣುಕು ತುಣುಕಾಗಿ ಚೆಲ್ಲಿಕೊಂಡಿರುವ ಇದೆಲ್ಲವನ್ನು, ಇವರೆಲ್ಲರನ್ನು ಓದುಗನೇ ತನಗೆ ಬೇಕಾದ ರೀತಿಯಲ್ಲಿ ಮರುಜೋಡಿಸಿಕೊಂಡು ಕತೆಯ ಆಂತರಿಕ ಸತ್ಯವನ್ನು ಕಂಡುಕೊಳ್ಳಬೇಕಾದ ತಂತ್ರ ಇಲ್ಲಿನದು. ಮತ್ತೆ ಇಲ್ಲಿನ ತುಣುಕುಗಳಾದರೂ ಪ್ರಥಮ ಪುರುಷ, ಉತ್ತಮ ಪುರುಷ ನಿರೂಪಣೆಗಳಲ್ಲಿ, ವರದಿಯ ರೂಪದಲ್ಲಿ, ನಾಟಕೀಯ ಗುಣವುಳ್ಳ ವರ್ಣನೆಯಲ್ಲಿ, ಪತ್ರ ರೂಪದಲ್ಲಿ, ಕೆಲವು ಪಾತ್ರಗಳಿಗೆ ಸಂಬಂಧಿಸಿದ ಟಿಪ್ಪಣಿಗಳಲ್ಲಿ ಇರುವುದರಿಂದ ಓದುಗ ತನ್ನ ಕುತೂಹಲವನ್ನು ತಣಿಸಿಕೊಳ್ಳಬೇಕಾದರೆ ಈ ಕತೆಯನ್ನು ಎರಡಲ್ಲ, ಮೂರು ಬಾರಿಯಾದರೂ ಓದಬೇಕು. ನಮ್ಮ ಅರಿವಿಗಿರುವ ಮಿತಿಯನ್ನು ಅಥವಾ ಅರಿವಿನ ಅಸಾಧ್ಯತೆಯನ್ನು ವ್ಯಾಖ್ಯಾನಿಸುತ್ತಿರುವ ಈ ಕತೆ ಸ್ವತಃ ಅಪೂರ್ಣವಾಗಿದೆ; ಅದು ಪೂರ್ಣವಾಗಬೇಕಾದ್ದು ಓದುಗನಿಂದ.

ಆತ್ಮಸಾಕ್ಷಿಯುಳ್ಳ ಒಬ್ಬ ವ್ಯಕ್ತಿಯ ತಲ್ಲಣಗಳನ್ನು ಚಿತ್ರಿಸುತ್ತಲೇ ಅವನ ಸುತ್ತಲಿನ ನಿರ್ದಯಿ ಸಮಾಜದ ವಿಕರಾಳತೆಯನ್ನೂ ಸೂಚಿಸುವ 'ಹಿಂಸಾರೂಪೇಣ' ಕತೆಯಲ್ಲಿ ಹಿಂಸೆಯ ಮಾನಸಿಕ, ದೈಹಿಕ ರೂಪಗಳೆರಡನ್ನೂ ಶೋಧಿಸಲಾಗಿದೆ. ಇಲ್ಲಿ ನಡೆದಿರುವ ಒಂದು ಕೊಲೆಗೆ ವಿವಿಧ ಪಾತ್ರಗಳು ಪ್ರತಿಕ್ರಿಯಿಸುವ ರೀತಿಯಲ್ಲಿಯೇ ನಮ್ಮ ಕಾಲದ ಸಮಾಜ ತಲುಪಿರುವ ನೈತಿಕ ಅಧಃಪತನದ ಸೂಕ್ಷ್ಮ ಎಳೆಗಳು ಕಾಣಿಸಿಕೊಳ್ಳುತ್ತವೆ. ಕತೆಯಲ್ಲಿ ಕೊಲೆಯಾದವನು ಯಾರು, ಕೊಲೆಮಾಡಿದವರು ಯಾರು ಎಂಬ ಪ್ರಶ್ನೆಗಳಿಗಿಂತ ಕೊಲೆಗೆ ಕಾರಣವೇನು ಎಂಬ ಪ್ರಶ್ನೆಯೇ ಮುಖ್ಯವಾಗಿದೆ. ಬಡ್ಡಿ ವ್ಯವಹಾರ ನಡೆಸುವ ಕುಪ್ಪುಸ್ವಾಮಿ ಹೇಳುವ, "ಪೇಪರಿನಲ್ಲಿ ಹೆಂಡ್ತಿ ಮಕ್ಕಳಿಗೆ ವಿಷ ಕೊಟ್ಟು ಸತ್ತವರು, ನೇಣು ಹಾಕ್ಕೊಂಡವರು, ಕೆರೆಯಲ್ಲಿ ಮುಳುಗಿದವರು ಎಲ್ಲ ಹೇಗೆ ಸತ್ತರು? ಮೊದಲು ಅವರಿಗೆ ಸಾಲ ಇತ್ತಾ ನೋಡಿ ನೀವು!" ಎಂಬ ಮಾತುಗಳು